ISSN-2347-5048



# ಶಿವಶರಣರ ತತ್ತ್ವಾನುಭಾವ ಸಾಹಿತ್ಯ : ವಿವೇಚನೆ

ಡಾ ಆರ್ ವಿ ಪಾಟೀಲ

ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ,
ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ,
ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ,
ಜ್ಞಾನದಲ್ಲಿ ಪರಮಾನಂದವೆಡೆಗೊಂಡ ಬಳಿಕ
ಸೌರಾಷ್ಟ್ರ ಸೋಮೇಶ್ವರನೆಂಬ 'ಲಿಂಗ'ವು ಬೇರಿಲ್ಲ ಕಾಣಿರೆ.

ಎಂಬ ತಾತ್ವಿಕ ನಿಲುವಿನಿಂದ ಶರಣರು ಬದುಕಿ ತೋರಿಸಿರುವರು. "ವಿಜ್ಞಾನ ಯಾವಾಗ ನಿಲ್ಲುತ್ತದೆಯೊ ಆಗ ಆಧ್ಯಾತ್ಮ ಪ್ರವೇಶ ಮಾಡುತ್ತದೆ." ಸನಾತನ ಸಂಸ್ಕೃತಿಯ ಧರ್ಮಗಳ ಪುಣ್ಯಧಾಮವಾಗಿರುವ ಭಾರತದ ನೆಲದ ಕಣಕಣದಲ್ಲಿಯೂ ಜ್ಞಾನದ ಗಣಿಯೇ ಇರುವುದು. ಇಲ್ಲಿಯ ಜ್ಞಾನ 'ಬಗೆದಷ್ಟು ಆಳ, ಸವಿದಷ್ಟು ರುಚಿ' ಹೆಚ್ಚುತ್ತಾ ಹೋಗುವುದು. ಇಂತಹ ಆಧ್ಯಾತ್ಮಿಕ ನೆಲೆಬೀಡಾದ ಈ ಮಣ್ಣಿನಲ್ಲಿ ಧರ್ಮಗಳು, ಧರ್ಮಗ್ರಂಥಗಳು, ತತ್ತ್ವ ಸಿದ್ಧಾಂತಗಳು, ಅವುಗಳ ಸೃಷ್ಟಿಕರ್ತರಾದ ಸಂತರು, ಮಹಂತರು, ದಾರ್ಶನಿಕರು, ಸೂಫಿಗಳು, ಶರಣರು, ಆಧ್ಯಾತ್ಮವಾದಿಗಳು, ಭಕ್ತ ಸಮೂಹ ಮತ್ತು ತತ್ವಜ್ಞಾನಿಗಳು ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಭಕ್ತಿಯ ಮೂಲಕ ಸುಸಂಸ್ಕೃತಿಯ ಬುನಾದಿ ಹಾಕಿ ಹೋಗಿದ್ದಾರೆ. ಅಂತಹ ಶ್ರೇಷ್ಠರು, ಪೂಜ್ಯನೀಯರು ಹಾಗೂ ಸ್ವತಂತ್ರರು ಆದ ೧೧-೧೨ನೇ ಶತಮಾನದ ಶಿವಶರಣರು ಅಚ್ಚಕನ್ನಡದ ಶೈಲಿಯಲ್ಲಿ ಮಾನವಜನ್ಮದ ಪಾವನಕ್ಕಾಗಿ, ಮೋಕ್ಷಕ್ಕಾಗಿ, ಭಕ್ತಿಯಮಾರ್ಗಕ್ಕಾಗಿ, ಸಮಾಜೋದ್ಧಾರ್ಮಿಕ ಸುಧಾರಣೆಯ ಮಾತುಗಳನ್ನು ವಚನವೆಂದು ಕರೆದರು. ಶಿವಯೋಗ ಸಾಧನೆಗಾಗಿ ಮಾನವ ದೇವಮಾನವನಾಗಲು, ಶಿವಯೋಗಿ ಸಂಗಿಯಾಗಲು, ತತ್ವ ಸಿದ್ಧಾಂತವನ್ನು ಅನುಭಾವದಿಂದಲೇ ರಚಿಸಿರುವರು. ಹೀಗೆ ರಚಿಸಿರುವ ಬರಹಗಳನ್ನೇ ತತ್ತ್ವಾನುಭಾವ ಸಾಹಿತ್ಯವೆಂದು ಕರೆಯಲಾಗಿದೆ.

ವಚನಕಾರರಿಗೆ ಕನ್ನಡ ಸಾಹಿತ್ಯದಲ್ಲಿ ಪೂಜ್ಯಸ್ಥಾನವಿದೆ. ಇವರ ಸಾಹಿತ್ಯ ಸಂಪತ್ತು ವಚನ ಹಾಗೂ ವಚನೇತರವಾದ ತತ್ತ್ವಸಾಹಿತ್ಯ ಎಂಬೆರಡು ಮುಖಗಳಲ್ಲಿ ಹೊರಹೊಮ್ಮಿದೆ. ಇಲ್ಲಿಯವರೆಗೆ ಅನೇಕ ಜನ ವಿದ್ವಾಂಸರು ವಚನಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಲವು ವಿಧಗಳಲ್ಲಿ ಅಧ್ಯಯನಗಳು ಸಾಕಷ್ಟು ನಡೆದಿವೆ. ಆದರೆ ಇನ್ನೊಂದು ಮುಖವಾದ ವಚನೇತರ ತತ್ತ್ವಯುಕ್ತ ಸಾಹಿತ್ಯ ಉಪೇಕ್ಷೆಗೆ ಈಡಾಗಿದೆ. ತತ್ತ್ವಶಾಸ್ತ್ರ, ಅನುಭಾವದ ವಿಚಾರಗಳೆರಡನ್ನೊಳಗೊಂಡ ಸುಂದರ ಸೈದ್ಧಾಂತಿಕ ಸಾಹಿತ್ಯವಾಗಿದೆ. ಶಿವಶರಣರು ವಚನಗಳನ್ನು ರಂಜನೆಯ ಲೀಲೆಗಾಗಿ ರಚಿಸಿದವರಲ್ಲ; ಬಳಸಿಕೊಂಡವರಲ್ಲ. ತಮ್ಮ ಜೀವನದ ಮೀಮಾಂಸೆಗೆ ಶಕ್ತಿಪೂರ್ಣವಾದ ತಳಹದಿಯನ್ನಾಗಿ ಮಾತ್ರ ರೂಪಿಸಿಕೊಂಡವರು. ಹೀಗಾಗಿ ವಚನ ಸಾಹಿತ್ಯ ಹಾಗೂ ವಚನಕಾರರನ್ನು ಕುರಿತು ಧಾರ್ಮಿಕ ಇಲ್ಲವೇ ತಾತ್ವಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಮಹತ್ವಪೂರ್ಣ ಅಧ್ಯಯನಗಳು ನಡೆಯುತ್ತಾ ಬಂದಿವೆ. ವಚನಗಳಿಗಿರುವ ಸತ್ವಮಹತ್ವಗಳು ವಚನೇತರ ತತ್ತ್ವ ಸಾಹಿತ್ಯಕ್ಕೂ ಇರುವುದರಿಂದ ಇವುಗಳ ಪರಿಚಯ ನಮಗಿಂದು ಅವಶ್ಯಕವಾಗಿದೆ.

ಡಾ. ಆರ್. ವಿ. ಪಾಟೀಲ,
ಕನ್ನಡ ವಿಭಾಗ, ಜೆ ಎಸ್ ಎಸ್ ಬನಶಂಕರಿ ಕಲಾ, ವಾಣಿಜ್ಯ ಎಸ್.ಕೆ. ಗುಬ್ಬಿ ವಿಜ್ಞಾನ ಕಾಲೇಜು, ವಿದ್ಯಾಗಿರಿ, ಧಾರವಾಡ.



ಒಂದು ಕಾಲಕ್ಕೆ ಚಂಪೂ, ರಗಳೆ, ಷಟ್ಪದಿಗಳಂತಹ ಪ್ರಸಿದ್ಧವೂ ಹಾಗೂ ಪ್ರಮುಖವೂ ಆಗಿದ್ದ ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯ ರಚಿಸಿದ ಗಣ್ಯಮಾನ್ಯ ವಚನ-ಸ್ವರವಚನ-ಟೀಕಾಕಾರರು ತಾರಾವಳಿ, ಉದ್ಧರಣ, ಕರಣಹಸಿಗೆ, ಸಕೀಲ, ಶತಕ, ಪ್ರಣವಲಾಲಿ, ಏಕೋತ್ತರ ಶತಸ್ಥಲ, ಉಯ್ಯಲು ಪದ, ಸೃಷ್ಟಿಯ ವಚನ, ದಂಡಕ, ಮಂತ್ರಗೋಪ್ಯ, ಅಷ್ಟಕ, ಗದ್ಯ, ಟೀಕುಗಳಂತಹ ವಿಶಿಷ್ಟ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿರುವುದು ಗಮನಿಸಬೇಕಾದ ಸಂಗತಿ. ಸಾಹಿತ್ಯ ಹಾಗೂ ತತ್ತ್ವಶಾಸ್ತ್ರ ವಿಚಾರಗಳೆರಡನ್ನೂ ಒಳಗೊಂಡ ಈ ಸಾಹಿತ್ಯ ಕೃತಿಗಳನ್ನು ಪುನಃಶ್ಚೇತನಗೊಳಿಸುವ ಹಾಗೂ ಪ್ರಚುರಗೊಳಿಸುವದು ಶಿವಶರಣರ ಬಹುಮುಖ ಪ್ರಯತ್ನವಾಗಿದೆ. ಸಾಹಿತ್ಯದ ಸೃಷ್ಟಿಯ ಪ್ರಯೋಜನಗಳನ್ನು ಕುರಿತು ಶಾಸ್ತ್ರೀಯವಾದ ತಾತ್ವಿಕ ಅಧ್ಯಯನ ಪರಿಚಯ ಇದಾಗಿದೆ.

ಶಿವಶರಣರ ವಚನೇತರ ಸಾಹಿತ್ಯವನ್ನು ಶಾಸ್ತ್ರಸಾಹಿತ್ಯ ಹಾಗೂ ತತ್ತ್ವಾನುಭಾವ ಸಾಹಿತ್ಯವೆಂದು ಕರೆಯಬಹುದು. ತಮ್ಮ ಸಾಹಿತ್ಯವನ್ನು ವಿವಿಧ ಹೊಸ ಪ್ರಯೋಗಗಳಿಂದ ಅನುಭಾವ, ನೀತಿ, ತತ್ತ್ವ ಮುಂತಾದ ಸಿದ್ಧಾಂತಗಳನ್ನು ರಚಿಸಿ ಶ್ರೀಮಂತಗೊಳಿಸಿದ್ದಾರೆ. ಇದರಿಂದ ಅರ್ಚನ, ಅರ್ಪಣ, ಅನುಭಾವ, ಅಷ್ಟಾವರಣ, ಪಂಚಾಚಾರ, ಷಟಸ್ಥಲ, ಶಿವಯೋಗ ಸಾಧನೆಯನ್ನು ಮಾಡುವುದಕ್ಕಾಗಿ ಸೃಷ್ಟಿಯ ವಚನ, ಏಕೋತ್ತರ ಷಟ್‌ಸ್ಥಲ, ಸ್ತೋತ್ರ, ನಾಂದ್ಯ, ಮಂತ್ರಗೋಪ್ಯ, ಸಕೀಲ, ತಾರಾವಳಿ, ಕರಣಹಸಿಗೆ, ಅಷ್ಟಕ, ದಂಡಕ, ಪ್ರಣವಲಾಲಿ, ಶತಕ, ಸ್ವರಚನ ಮುಂತಾದ ರೂಪಗಳಲ್ಲಿ ಅನುಭಾವದ ತತ್ವವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆ. ಇವುಗಳಲ್ಲಿ ಶರಣರ ಸಾಹಿತ್ಯಕ್ಕೆ ಸೈದ್ಧಾಂತಿಕ ನೆಲೆಗಟ್ಟನ್ನು ತಂದು ಕೊಂಡಿದ್ದಾರೆ.

ಎಲ್ಲ ಧರ್ಮಗಳಲ್ಲಿಯೂ 'ತತ್ತ್ವಸಿದ್ಧಾಂತ' ಮತ್ತು 'ಸಾಧನಾಮಾರ್ಗ'ಗಳಿರುವಂತೆ ಶರಣರ ಈ ತತ್ತ್ವಾನುಭಾವ ಸಾಹಿತ್ಯದಲ್ಲಿಯೂ ಇರುವವು. ಇಲ್ಲಿ ತತ್ವಜ್ಞಾನ ಧರ್ಮವನ್ನು ಕುರಿತು ವಿಚಾರ ಮಾಡಿದರೆ; ಸಾಧನಮಾರ್ಗ ತಾತ್ವಿಕ ಜಿಜ್ಞಾಸುವಿನ ಆಚರಣೆ ಕುರಿತು ತಿಳಿಸುತ್ತದೆ. ಈ ಆಚಾರ-ವಿಚಾರಗಳ ಒಂದುಗೂಡುವಿಕೆಯೇ ಇಲ್ಲಿ ಜ್ಞಾನ-ಕ್ರಿಯೆಗಳ ಸಮನ್ವಯ. ಇದನ್ನು ಸಾಧಿಸುವುದೇ ೧೧-೧೨ನೆಯ ಶತಮಾನದ ಶಿವಶರಣರ ಪ್ರಮುಖ ಉದ್ದೇಶವಾಗಿತ್ತು. ತಾತ್ವಿಕ ಭೂಮಿಕೆಯಲ್ಲಿ ಇಷ್ಟಲಿಂಗ, ಷಟ್‌ಸ್ಥಲಗಳಂತಹ ವಿಚಾರಗಳನ್ನು ಶಿವಶರಣರು ಕಂಡುಕೊಂಡರು. ಇವುಗಳನ್ನು ವಚನಕಾರರು ವಚನಗಳ ಮೂಲಕ ಸರಳೀಕರಿಸಿ ತಿಳಿಸಿದರೂ ಕೂಡ ಶಾಸ್ತ್ರೀಯ ಚೌಕಟ್ಟಿನ ಹಿನ್ನೆಲೆಯಲ್ಲಿ ಒಂದೊಂದು ಸ್ವತಂತ್ರ ಕೃತಿಗಳನ್ನಾಗಿಯು ರೂಪಿಸಿದ್ದಾರೆ. ಮಂತ್ರಗೋಪ್ಯ, ಏಕೋತ್ತರ ಶತಸ್ಥಲ, ಉದ್ಧರಣ ಪಟಲ, ಸಕೀಲ, ಪ್ರಣವಲಾಲಿ, ಉಯ್ಯಲು ಪದ, ಕರಣ ಹಸಿಗೆ, ಶತಕ, ಅಷ್ಟಕ, ಮಿಶ್ರಾರ್ಪಣ, ಪಂಚೀಕರಣ, ದಂಡಕ, ಬೊಲ್ಲಿ, ಸ್ತೋತ್ರ, ನಾಂದ್ಯ, ತ್ರಿವಿದಿ ಮುಂತಾದ ಕೃತಿಗಳು, ಶಿವಯೋಗ ಸಾಧನೆಗೆ ಹಾಗೂ ಸಾಧಕನಿಗೆ ಗುಣಕರ್ಮಗಳನ್ನು ತಿಳಿಸುವ ದೀಕ್ಷಾ ವಿಧಾನಗಳಾಗಿವೆ. ಇಂತಹ ಸತ್ವಪೂರ್ಣ ತಾತ್ವಿಕ ಸಾಹಿತ್ಯಕೃತಿಗಳನ್ನು ಶಿವಶರಣರೇ ಸೃಷ್ಟಿಸಿದ್ದಾರೆ.

ಮಠಾಧಿಪತಿಗಳ ನಿರಾಭಾರ ಪಟ್ಟಾಧಿಕಾರದ ಪ್ರಕ್ರಿಯೆಯಲ್ಲಿ ಈ ತಾತ್ತ್ವಿಕ ಸಾಹಿತ್ಯಕ್ಕಿರುವ ಮನ್ನಣೆ ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವುದು ತುಂಬಾ ಮಹತ್ವದ್ದಾಗಿದೆ. ಗ್ರಂಥಕಾಣಿಕೆಯ ರೂಪದಲ್ಲಿ ಶಾಸ್ತ್ರದಾನವನ್ನು ಶಿವಶರಣರು ಪಟ್ಟಾಧಿಕಾರ ಸಮಯದಲ್ಲಿ ಶಾಸ್ತ್ರಗ್ರಂಥಗಳ ಕಟ್ಟುಗಳನ್ನಿಡುವ ಹಿನ್ನೆಲೆ-ಸಂದರ್ಭ ಭಿನ್ನವಾಗಿದೆ. ಲಿಂಗದೀಕ್ಷೆ, ಜಂಗಮ



PRINCIPAL
J.S.S. Banashankari Arts Commerce &
Shantikumar Gubbi Science College,
DHARWAD-580004

02-12-2021
Date-
UGC-care